# ಸೀಡ್‌ಬಾಲ್ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮೈಸೂರು: ಬಿಜೆಪಿ ಹಿಂದುಳಿದ ವರ್ಗಗಳ ನಗರ ಮೋರ್ಚಾ ವತಿಯಿಂದ ಹಮ್ಮಿಕೊಂಡಿರುವ ಸೀಡ್‌ಬಾಲ್ ಅಭಿಯಾನಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಬುಧವಾರ ಚಾಲನೆ ನೀಡಿದರು.

ಪಕ್ಷದ ನಗರ ಮೋರ್ಚಾ ವತಿಯಿಂದ 50 ಸಾವಿರ ಸೀಡ್‌ಬಾಲ್‌ಗಳನ್ನು ಹಾಕುವ ಗುರಿ ಇಟ್ಟುಕೊಳ್ಳಲಾಗಿದೆ. ಮೊದಲ ದಿನ ಚಾಮುಂಡಿಬೆಟ್ಟದ ತಪ್ಪಲು, ದೇವಿಕೆರೆ ಮತ್ತು ಉತ್ತನಹಳ್ಳಿ ಭಾಗದಲ್ಲಿ ಸುಮಾರು 12 ಸಾವಿರ ಸೀಡ್‌ಬಾಲ್‌ಗಳನ್ನು ಹಾಕಲಾಯಿತು. ಕ್ಯಾಟರ್ ಬಿಲ್ಲುಗಳ ಮೂಲಕ ಸೀಡ್‌ಬಾಲ್‌ಗಳನ್ನು ತುಂಬಾ ದೂರಕ್ಕೂ ಎಸೆಯಲಾಯಿತು.

ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಜನ್ಮದಿನ ಹಾಗೂ ಪುಣ್ಯ ಸ್ಮರಣೆ ಅಂಗವಾಗಿ ರಾಜ್ಯದಾದ್ಯಂತ ಹಮ್ಮಿಕೊಂಡಿರುವ ವೃಕ್ಷಾರೋಹಣ ಕಾರ್ಯಕ್ರಮದ ಅಂಗವಾಗಿ ನಳಿನ್ ಕುಮಾರ್ ಗಿಡನೆಟ್ಟರು.

ಬಳಿಕ ಮಾತನಾಡಿ, 'ಪರಿಸರವನ್ನು ಉಳಿಸುವ ನಿಟ್ಟಿನಲ್ಲಿ ಪಕ್ಷದ ವತಿಯಿಂದ ವೃಕ್ಷಾರೋಹಣ ಮತ್ತು ಸೀಡ್‌ಬಾಲ್ ಅಭಿಯಾನ ಆಯೋಜಿಸಲಾಗಿದೆ. ಈಗ ಇರುವ ಮರಗಳನ್ನು ಉಳಿಸಿಕೊಳ್ಳುವ ಜತೆಗೆ, ಹೆಚ್ಚೆಚ್ಚು ಗಿಡಗಳನ್ನು ನೆಡಬೇಕು' ಎಂದು ಸಲಹೆ ನೀಡಿದರು.



ನಳಿನ್ ಕುಮಾರ್ ಕಟೀಲ್ ಅವರು ಕ್ಯಾಟರ್ ಬಿಲ್ಲಿನ ನೆರವಿನಿಂದ ಸೀಡ್‌ಬಾಲ್ ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಟಿ.ಎಸ್.ಶ್ರೀವತ್ಸ, ನೆ.ಲ. ನರೇಂದ್ರ ಬಾಬು, ಆರ್.ರಘು ಕೌಟಿಲ್ಯ ಪಾಲ್ಗೊಂಡಿದ್ದರು

**ಮುಖ್ಯಾಂಶಗಳು**

- ನಳಿನ್ ಕುಮಾರ್ ಕಟೀಲ್ ಚಾಲನೆ
- ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಆಯೋಜನೆ
- ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು ಭಾಗಿ

'ಸೀಡ್‌ಬಾಲ್ ಅಭಿಯಾನ ಇನ್ನೊಂದು ವಾರ ಮುಂದುವರಿಯಲಿದೆ. ಮುಂದಿನ ದಿನಗಳಲ್ಲಿ ಎಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣದ ಗುಡ್ಡಗಾಡಿನ ಪ್ರದೇಶ ಹಾಗೂ ಚಾಮರಾಜನಗರದ ಮಹದೇಶ್ವರಬೆಟ್ಟದ ಪ್ರದೇಶದಲ್ಲೂ ಅಭಿಯಾನ ನಡೆಸುವ ಉದ್ದೇಶ ಇಟ್ಟುಕೊಂಡಿದ್ದೇವೆ' ಎಂದು ಮೋರ್ಚಾದ ನಗರ ಅಧ್ಯಕ್ಷ ಎನ್. ಮಂಜುನಾಥ್ (ಜೋಗಿ ಮಂಜು) ತಿಳಿಸಿದರು.

ಮೋರ್ಚಾದ ರಾಜ್ಯ ಅಧ್ಯಕ್ಷ ನೆ.ಲ.ನರೇಂದ್ರ ಬಾಬು, ರಾಜ್ಯ ಉಪಾಧ್ಯಕ್ಷ ಗೋವಿಂದರಾಜು, ಬಿಜೆಪಿ ಮೈಸೂರು ನಗರ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್, ಮೋರ್ಚಾದ ಜಿಲ್ಲಾ ಅಧ್ಯಕ್ಷ ಪರಶುರಾಮಪ್ಪ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್.ರಘು ಕೌಟಿಲ್ಯ, ಮುಖಂಡರಾದ ವಿವೇಕಾನಂದ, ಸಿದ್ದರಾಜು, ಗೋಪಾಲ್, ಮಣಿರತ್ನ, ಪಾಪಣ್ಣ, ಸೋಮಣ್ಣ, ಅಭಿಲಾಷ್, ನಾಗೇಶ್, ಮಂಜು ಪಾಲ್ಗೊಂಡರು.

## ಮನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ... ಕೃಷ್ಣ ಬಡಾವಣೆಯ ... ಎಂಬುವವರ ಮನೆಯ ... ಕಳ್ಳರು ₹ 40 ಸಾವಿ ... ಲ್ಯಾಪ್‌ಟಾಪ್‌ನ್ನು ದೋ ...

'ಇವರು ಮಂಗಳ ... ಬೀಗ ಹಾಕಿಕೊಂಡ ... ಸಂಜೆ ಹೊತ್ತಿಗೆ ಮನೆ ... ಕಳ್ಳತನವಾಗಿರುವುದ ... ಪೊಲೀಸರು ತಿಳಿ ... ಠಾಣೆಯಲ್ಲಿ ಪ್ರಕರಣ ...

ಕಳ್ಳರು 'ಇತ್ತೀಚೆ ... ಗುರಿಯಾಗಿಸಿಕೊಂಡ ... ತ್ತಿದ್ದು, ನಾಗರಿಕರು ... ಎಂದು ಪೊಲೀಸರು ...

## 'ವಿಶ್ವ

ಪ್ರಜಾವಾಣಿ ವಾರ್ತೆ

ಮೈಸೂರು: 'ಇತರ ... ಹೋಲಿಸಿದರೆ ಭಾ ... ವಿಶ್ವದಲ್ಲೇ ಹಿರಿಯ ... ಮತ್ತೂರು ನಂದಕ ...

ಜೆಎಸ್‌ಎಸ್ ವ ... ಶಿವರಾತ್ರೀಶ್ವರ ಧಾ ... ಸೋಮವಾರ ಏಪ ... ಸಿದ್ದ 'ಜ್ಞಾನವಾರಿಧಿ ... ಸಾಪ್ತಾಹಿಕ ಉಪ ... ಅವರು 'ಭಾರತದ ...